**ಸೂಚನೆಗಳು :** ಮುಂದಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 1-5) ಪದಗಳು ಕ್ರಮಬದ್ಧವಾಗಿಲ್ಲ. ಅವು ಅರ್ಥಪೂರ್ಣವಾಗುವಂತೆ ಗೆರೆ ಎಳೆದು ಸೂಚಿಸಿದ ಭಾಗಗಳನ್ನು ಪುನಃ ಜೋಡಿಸಿ, ಅವುಗಳ ಅನುಕ್ರಮವನ್ನು ಗುರುತಿಸಿ :

**ಉದಾಹರಣೆ :**

ನೋಡಿ (P) ದುರುಗುಟ್ಟ (Q) ಸುಟ್ಟುರಿಯುವಂತೆ (R) ದೌಡಾಯಿಸಿದಳು (S)

(1) QRPS

(2) RSPQ

(3) RQPS

(4) RPQS

ಇಲ್ಲಿ QRPS ಎಂಬುದು ಸರಿಯಾದ ಕ್ರಮ. ಆದುದರಿಂದ ಇಲ್ಲಿ (1) ನ್ನು ಗುರುತಿಸಬೇಕು.

1. ಪರಂಪರೆಯನ್ನು ನಿರ್ಮಿಸುವುದೇ (P) ಶ್ರೇಷ್ಠತೆಯ ಲಕ್ಷಣವಾಗಿತ್ತು (Q) ಒಂದು ಕಾಲಕ್ಕೆ (R) ಸಾಹಿತ್ಯ ಸಂಗೀತ ನೃತ್ಯ ಕಲೆಗಳಲ್ಲಿ (S)

(1) QRPS

(2) PSQR

(3) SRPQ

(4) RSPQ

2. ಮಾನಸಿಕ ಸ್ಥಿತಿ ಹದಗೆಡುತ್ತಿದೆ (P) ಅತಿಯಾದ ಬಳಕೆಯಿಂದ (Q) ವಿದ್ಯಾರ್ಥಿಗಳ (R) ಮೊಬೈಲ್‌ಗಳ (S)

(1) PQRS

(2) SQRP

(3) QPRS

(4) RSPQ

3. ವಿವಿಧ ವರ್ಗಗಳಿಂದ ಬಂದ ಜನರು (P) ಅಂದಿನ ಸಮಾಜದ (Q) ಪಾಲ್ಗೊಂಡರು (R) ವಚನ ರಚನೆಯಲ್ಲಿ (S)

(1) SQPR

(2) PRQS

(3) QRPS

(4) RSQP



downloaded from: www.kpscvaani.com
Scanned by CamScanner

4. ಅದನ್ನು ಪಡೆಯುವ (P) ಜ್ಞಾನಸಂಪಾದನೆಯಲ್ಲಿ (Q) ಯಾವಾಗಲೂ ಅತೃಪ್ತಿ ಉಳಿಯಬೇಕು (R) ವಿದ್ಯಾರ್ಥಿಗಳಲ್ಲಿ (S)

(1) SRQP

(2) PQRS

(3) QPSR

(4) SPQR

5. ತೂಕವಾಗಿರಬೇಕು (P) ಬರವಣಿಗೆಯ ಭಾಷೆಯು (Q) ಮತ್ತು ಶುದ್ಧವಾಗಿರಬೇಕು (R) ಆಡುವ ಭಾಷೆಗಿಂತಲೂ (S)

(1) PSQR

(2) SQPR

(3) RPQS

(4) SPQR

ಸೂಚನೆಗಳು: ಈ ಕೆಳಗೆ (ಪ್ರಶ್ನೆಸಂಖ್ಯೆ 6-10) PQRS ಎಂಬ ನಾಲ್ಕು ವಾಕ್ಯಗಳನ್ನು ಕೊಡಲಾಗಿದೆ. ಈ ವಾಕ್ಯಗಳು ಸ್ಥಾನಪಲ್ಲಟವಾಗಿವೆ. ಅವುಗಳನ್ನು ಅರ್ಥಪೂರ್ಣವಾಗಿ ಜೋಡಿಸುವ ಉತ್ತರವನ್ನು ಗುರುತಿಸಬೇಕು.

ಉದಾಹರಣೆ:

P. ಪುಲಿಗೆರೆ, ಕಿಸುವೊಳಲ್, ಕೊಪ್ಪಳ ಮತ್ತು ಒಕ್ಕುಂದ ಇವೇ ಆ ನಾಲ್ಕು ನಗರಗಳು.

Q. ಒಂಭತ್ತನೆಯ ಶತಮಾನದಲ್ಲಿ ಕನ್ನಡನಾಡು ಕಾವೇರಿಯಿಂದ ಗೋದಾವರಿಯ ವರೆಗೆ ಹಬ್ಬಿತ್ತು.

R. ಆ ನಾಡಿನಲ್ಲಿನ ನಾಲ್ಕು ನಗರಗಳ ಮಧ್ಯದ ಕನ್ನಡವೇ ಕನ್ನಡದ ತಿರುಳೆಂದು ಕವಿ ಹೇಳಿದ್ದಾನೆ.

S. ಆ ನಾಡಿನಲ್ಲಿ ವಾಸವಾಗಿದ್ದ ಜನತೆಯ ಉನ್ನತ ಸಂಸ್ಕೃತಿಯಿಂದಾಗಿ ಇಡೀ ವಿಶ್ವದಲ್ಲಿ ಕನ್ನಡನಾಡು ಒಂದು ವಿಶೇಷ ಸ್ಥಾನವನ್ನು ಪಡೆದಿತ್ತು.

(1) QSRP

(2) SRQP

(3) PQRS

(4) RPQS

ಇಲ್ಲಿ ಸರಿಯಾದ ಉತ್ತರ QSRP. ಆದುದರಿಂದ ಇಲ್ಲಿ (1) ನ್ನು ಗುರುತಿಸಬೇಕು.



downloaded from: www.kpscvaani.com

Scanned by CamScanner

6. P. ಒಮ್ಮೆ ಆಕಾಶಕ್ಕೆ ಏರಿ, ಮತ್ತೆ ಎತ್ತರದಿಂದ ಧಡಕ್ಕನೆ ಕೆಳಕ್ಕೆ ಧುಮುಕುತ್ತದೆ. ಮೇಲೆ-ಕೆಳಗೆ ಆಡಿ, ಸುತ್ತ-ಮುತ್ತ ತಿರುಗಿ ಗಿರಕಿ ಹೊಡೆಯುತ್ತ ಸುಸ್ತು ಹೊಡೆಸುತ್ತದೆ.

Q. ಗಾಳಿಪಟವು ಇದ್ದಲ್ಲಿ ಇರದೆ ದಿಕ್ಕು ಬದಲಿಸುತ್ತಾ ಗಾಳಿ ಬೀಸಿದ ಕಡೆಗೆ ಹಾರುತ್ತಲೇ ಇರುತ್ತದೆ.

R. ನಾವು ಒಂದು ಗಾಳಿಪಟವನ್ನು ಹಿಡಿದಿದ್ದೇವೆ. ಮಧ್ಯದಲ್ಲಿರುವ ದಾರವೇ ನಮ್ಮ ಸಂಬಂಧದ ಕೊಂಡಿ.

S. ಜೋರಾಗಿ ಗಾಳಿ ಬೀಸಿದಾಗಲೆಲ್ಲಾ ಎತ್ತಲೋ ಹಾರಲು ನೋಡುತ್ತದೆ. ಅದನ್ನು ಆಡಿಸುತ್ತಾ ನಾವೂ ಸಾಗಬೇಕು.

(1) PQRS

(2) SRQP

(3) RQPS

(4) PSRQ

7. P. ಮೂಲದ 68 ಅಧ್ಯಾಯದ ವಿಸ್ತಾರವು ಇಲ್ಲಿ 34 ಸಂಧಿಗಳಲ್ಲಿ ಅಡಕವಾಗಿದೆ.

Q. ಅಲ್ಲಲ್ಲಿ ಮೂಲ ವಿಸ್ತಾರವನ್ನು ಮಾಡಿದ್ದರೂ ಶೃಂಗಾರ ವಿಶೇಷವಾಗಿ ಭಕ್ತಿ ಮತ್ತು ವೀರ - ಈ ರಸಗಳ ವರ್ಣನೆಗೆ ಹೆಚ್ಚಿನ ಅವಕಾಶ ಕಲ್ಪಿಸಿದ್ದಾನೆ.

R. ಲಕ್ಷ್ಮೀಶನ ಜೈಮಿನಿ ಭಾರತವು ಸಂಸ್ಕೃತ ಜೈಮಿನಿ ಭಾರತದ ಸಂಗ್ರಹ ರೂಪವಾದ ಅನುವಾದವಾಗಿದೆ.

S. ಇಷ್ಟಾದರೂ ಸಂಗ್ರಹ ಕಾರ್ಯದಲ್ಲಿ ಅವನ ಸ್ವತಂತ್ರ ಪ್ರತಿಭೆ ಬೆಳಗದೆ ಇಲ್ಲ.

(1) QPRS

(2) RSPQ

(3) RPSQ

(4) RQPS

8. ಈ ಕೆಳಗಿನ ಪ್ರಶ್ನೆಗೆ PQRS ಎಂಬ ನಾಲ್ಕು ವಾಕ್ಯಗಳನ್ನು ಕೊಡಲಾಗಿದೆ. ಸ್ಥಾನಪಲ್ಲಟವಾಗಿರುವ ಈ ವಾಕ್ಯಗಳನ್ನು ಅರ್ಥಪೂರ್ಣವಾಗಿ ಜೋಡಿಸುವ ಉತ್ತರವನ್ನು ಗುರುತಿಸಬೇಕು.

P. ಅನೇಕ ಪ್ರಜಾಹಿತ ಕಾರ್ಯಗಳನ್ನು ನಿಷ್ಠೆಯಿಂದ ಮಾಡಿ ಹನ್ನೆರಡು ಮಂದಿ ದಿವಾನರು ಮೈಸೂರು ಸಂಸ್ಥಾನವನ್ನು ಪ್ರಗತಿಗೆ ಒಯ್ದರು.

Q. ಸಾಮಾನ್ಯವಾಗಿ ಭಾರತದ ಚರಿತ್ರೆಯಲ್ಲಿ ಗುಪ್ತರ ಕಾಲವನ್ನು ಸ್ವರ್ಣಯುಗವೆಂದು ಹೇಳುವರು.

R. ಒಬ್ಬೊಬ್ಬರ ಆಡಳಿತ ಕಾಲದಲ್ಲೂ ಮೈಸೂರು ಸಂಸ್ಥಾನ ಸರ್ವತೋಮುಖ ಅಭಿವೃದ್ಧಿ ಕಂಡಿತು.

S. ಕರ್ನಾಟಕದಲ್ಲಿ ದಿವಾನರ ಕಾಲವನ್ನು ಹೀಗೆ ಗುರುತಿಸುವುದುಂಟು.

(1) PQRS

(2) QSPR

(3) QPSR

(4) RPQS

9. P. ಒಂದು ರಾತ್ರಿ ಕಳ್ಳನೊಬ್ಬ ಬಂದು ನೀಲಾಂಬಿಕೆಯ ಕಿವಿಯೋಲೆಗೆ ಕೈಹಾಕುತ್ತಾನೆ.

Q. 'ಕಳ್ಳ ಕಳ್ಳ, ಕಳ್ಳ ಬಂದಿದ್ದಾನೆ' ಎಂದು ನೀಲಾಂಬಿಕೆ ಚೀರಿದಾಗ ಬಸವಣ್ಣನವರಿಗೆ ಎಚ್ಚರವಾಗುತ್ತದೆ.

R. ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದೊಡೆ 'ಕೂಡಲ ಸಂಗಮದೇವನಲ್ಲದೇ ಮತ್ತಾರೂ ಇಲ್ಲ' ಎಂದು ತಿಳಿಹೇಳಿ ಕಿವಿಯೋಲೆ ಬಿಚ್ಚಿಕೊಡಲು ಆಜ್ಞಾಪಿಸುತ್ತಾರೆ ಬಸವಣ್ಣನವರು ನೀಲಾಂಬಿಕೆಗೆ.

S. ನಮ್ಮ ಮನೆಗೆ ಬಂದವ ಕಳ್ಳನಲ್ಲ, ಭಕ್ತ. ಅವನೇ ನಮ್ಮ ಸಂಗಮನಾಥನಾಗಿರಬಹುದು.

(1) SRQP

(2) RSPQ

(3) PQSR

(4) QSRP



downloaded from: www.kpscvaani.com
Scanned by CamScanner

10. P. ದೇವನೂರರು 'ಕುಸುಮಬಾಲೆ' ಬರೆಯಲು ತಮಗೆ ಸಿಕ್ಕ ಪ್ರೇರಣೆಗಳನ್ನು ಒಂದೆಡೆ ಹೇಳಿಕೊಳ್ಳುತ್ತಾರೆ.

Q. ಎರಡೂ ರಕ್ತದ ಚಿತ್ರಗಳು ಸೇರಿ 'ಕುಸುಮಬಾಲೆ' ಕಥನ ಮೂಡಲು ಕಾರಣವಾಯಿತು ಎಂಬರ್ಥದಲ್ಲಿ ಅವರು ಮಾತನಾಡುತ್ತಾರೆ.

R. ಎರಡನೆಯದು ಕರ್ನಾಟಕದ ಒಂದು ಹಳ್ಳಿಯಲ್ಲಿ, ಕೊಲೆಯಾದ ದಲಿತನ ರಕ್ತಕಲೆ, ಸುಣ್ಣ ಬಳಿದರೂ ಗೋಡೆಯಲ್ಲಿ ಕಾಣುತ್ತಿದ್ದ ಚಿತ್ರ.

S. ಮೊದಲನೆಯದು ಮಾರ್ಕ್ವೆಜ್ ಕಾದಂಬರಿಯಲ್ಲಿ ಬರುವ ಕೊಲೆಯಾದವನ ರಕ್ತ ಬೀದಿಯಲ್ಲಿ ಹರಿದು ಬರುವ ದೃಶ್ಯ.

(1) SPRQ

(2) PSRQ

(3) QSRP

(4) RPQS

**ಸೂಚನೆಗಳು : ಕೆಳಗೆ ಕೊಡಲಾದ ಗಾದೆಗಳ ಅರ್ಥವನ್ನು ಗ್ರಹಿಸಿ ಪೂರ್ಣಗೊಳಿಸಿ (ಪ್ರಶ್ನೆ ಸಂಖ್ಯೆ 11-13) :**

11. ಚೆಂದುಳ್ಳಿ ಹೆಣ್ಣಿಗೆ ಒಡವ್ಯಾಕೆ ಹೊಸರಾಗಿ ಹಿಟ್ಟಿಗೆ ______

(1) ಮೊಸರ್‍ಯಾಕೆ

(2) ಮುದ್ದ್ಯಾಕೆ

(3) ಎಸರ್‍ಯಾಕೆ

(4) ಎಲೆಯಾಕೆ

12. ಮೇಸ್ತ್ರಿಗೊಂದು ಊರಿಲ್ಲ______

(1) ಮೇಡಂಗೊಂದು ಮನೆಯಿಲ್ಲ

(2) ಶಾಲೆಗೊಂದು ಊರಿಲ್ಲ

(3) ವಿದ್ಯಾರ್ಥಿಗೊಂದು ಶಾಲೆಯಿಲ್ಲ

(4) ಕೊಕ್ಕರೆಗೊಂದು ಕೆರೆಯಿಲ್ಲ

13. "ಚಾಡಿ ಹೇಳುವವನಿಗೆ ______

(1) ಊರೆಲ್ಲ ನೆಂಟರು

(2) ಊರೆಲ್ಲ ಸಿರಿ ಸಂಪತ್ತು

(3) ಊರೆಲ್ಲಾ ಉಪಕಾರ

(4) ಊರೆಲ್ಲ ವೈರಿಗಳು

**ಸೂಚನೆಗಳು : ಕೆಳಗೆ ಕೊಡಲಾದ ಒಗಟುಗಳನ್ನು ಬಿಡಿಸಿ, ಉತ್ತರ ಗುರುತಿಸಿ : (ಪ್ರಶ್ನೆ ಸಂಖ್ಯೆ 14-16) :**

14. 'ಉದ್ದನೆಯ ಹೆಂಗಸು ಹೊತ್ತವಳೆ ನೂರು ಹರವಿಯ'

(1) ಜೇನು ಹುಳು

(2) ಹಲಸಿನ ಮರ

(3) ಬಸುರಿ ಹೆಂಗಸು

(4) ತೆಂಗಿನ ಮರ



downloaded from: www.kpscvaani.com
Scanned by CamScanner

15. ಅಕ್ಕಕ್ಕಾ ಸಿವನ್ ನೋಡೆ
ಸಿವನ ಸುತ್ತ ಪತ್ರೆ ನೋಡೆ
ಸಿವನ ಒಳ್ಗೆ ಗಂಗೆ ನೋಡೆ
ಮಸಣದ ಬೂದಿ ಮೈಮ್ಯಾಗ್ ನೋಡೆ
ಕುಂತ ಭಂಗಿ ತಪಸ್ಸು ನೋಡೆ

(1) ಬೂದುಗುಂಬಳ ಕಾಯಿ

(2) ತೆಂಗಿನಕಾಯಿ

(3) ಹಲಸಿನ ಕಾಯಿ

(4) ಹುರುಳೀಕಾಯಿ

16. ಹತ್ತು ಮಕ್ಕಳ ತಾಯಿ
ಹರಕುಸೀರೆ ಉಟ್ಕೊಂಡು
ಹತ್ತು ಮಕ್ಕಳ ಎತ್ತಿಕೊಂಡು
ದೊರೆಗಳ ಮನೆಗೆ ಊಟಕ್ಕೆ ಹೋದ್ಲು

(1) ಬಾಳೇ ಎಲೆ

(2) ಈರುಳ್ಳಿ

(3) ಬೆಳ್ಳುಳ್ಳಿ

(4) ವೀಳೆದೆಲೆ

*ಸೂಚನೆಗಳು : ಕೆಳಗಿನ ಪ್ರಶ್ನೆಗಳನ್ನು ಓದಿ ಉತ್ತರವನ್ನು ಗುರುತಿಸಿ (ಪ್ರಶ್ನೆ ಸಂಖ್ಯೆ 17-30) :*

17. ದ್ವಿರುಕ್ತಿಗೆ ಉದಾಹರಣೆ

(1) ಒಂದೆರಡು

(2) ಮೊಟ್ಟಮೊದಲು

(3) ಗಟ್ಟಿಮೇಳ

(4) ನಾಲ್ಕಾರು

18. 'ಭಿಕ್ಷಾ' ಪದದ ತದ್ಭವ ರೂಪ

(1) ಭಿಕ್ಷೆ

(2) ತಿರುಪೆ

(3) ಬಿಕ್ಕೆ

(4) ಬಿಕ್ಕು

19. 'ತಿಳಿದಾಳು'

(1) ವಿಧ್ಯರ್ಥ ರೂಪ

(2) ಸಂಭಾವನಾರ್ಥ ರೂಪ

(3) ನಿಷೇಧಾರ್ಥ ರೂಪ

(4) ಭಾವಾರ್ಥ ರೂಪ

20. 'ವಿಶ್ವಕಥಾಕೋಶ'ದ ಸಂಪಾದಕರು

(1) ಕೋ. ಚನ್ನಬಸಪ್ಪ

(2) ಮಾಸ್ತಿ ವೆಂಕಟೇಶ ಅಯ್ಯಂಗಾರ್

(3) ನಿರಂಜನ

(4) ತ.ರಾ.ಸು.

21. 'ಕಿವುಡು' ಎಂಬುದು

(1) ಕೃದಂತ ನಾಮ

(2) ತದ್ಧಿತಾಂತ ನಾಮ

(3) ಕೃದಂತ ಭಾವನಾಮ

(4) ತದ್ಧಿತಾಂತ ಭಾವನಾಮ



downloaded from: www.kpscvaani.com
Scanned by CamScanner

22. ಪಪ್ಪಾಯಿ ಎಂಬುದು ______ ಭಾಷೆಯ ಪದ.

(1) ಕನ್ನಡ

(2) ಮರಾಠಿ

(3) ಅರಬ್ಬಿ

(4) ಪೋರ್ಚುಗೀಸ್

23. 'ಸರಕು' ಎಂಬ ಪದದ ಅರ್ಥದ ಛಾಯೆಯನ್ನು ಪ್ರತಿಧ್ವನಿಸುವ ಜೋಡಿಶಬ್ದ

(1) ಸಲಕರಣೆ

(2) ಸರಂಜಾಮು

(3) ಪರಿಕರ

(4) ಪದಾರ್ಥ

24. 'ಮೂಗಾವುದ' ಇದು ಯಾವ ಸಮಾಸಕ್ಕೆ ಉದಾಹರಣೆ?

(1) ತತ್ಪುರುಷ ಸಮಾಸ

(2) ಬಹುವ್ರೀಹಿ ಸಮಾಸ

(3) ದ್ವಿಗು ಸಮಾಸ

(4) ಅಂಶಿ ಸಮಾಸ

25. "ನಾವೆಲ್ಲರೂ ಒಂದೇ ಜಾತಿ, ಒಂದೇ ಮತ, ಒಂದೇ ಕುಲ; ನಾವು ಮನುಜರು" ಎಂದ ಕವಿ

(1) ಜಿ.ಎಸ್. ಶಿವರುದ್ರಪ್ಪ

(2) ಗೋಪಾಲಕೃಷ್ಣ ಅಡಿಗ

(3) ಕುವೆಂಪು

(4) ಚನ್ನವೀರ ಕಣವಿ

26. "ಬೇಡಲು ಬಂದಿಹೆನು ಕನ್ನಡದ ದಾಸಯ್ಯ" ಎಂಬ ಹಾಡಿನಿಂದ ಪ್ರಸಿದ್ಧರಾದವರು

(1) ಶಾಂತಕವಿ

(2) ಗೋವಿಂದ ಪೈ

(3) ಹುಯಿಲುಗೋಳ ನಾರಾಯಣರಾವ್

(4) ಸಿದ್ದಯ್ಯ ಪುರಾಣಿಕ

27. 'ಕರ್ನಾಟಕ ಕವಿ ಚರಿತ್ರೆ' ಕರ್ತೃ

(1) ಡಿ.ಎಲ್. ನರಸಿಂಹಾಚಾರ್

(2) ಆರ್. ನರಸಿಂಹಾಚಾರ್

(3) ಬಿ.ಎಂ. ಶ್ರೀಕಂಠಯ್ಯ

(4) ತೀ.ನಂ. ಶ್ರೀಕಂಠಯ್ಯ



downloaded from: www.kpscvaani.com
Scanned by CamScanner

28. ಪಟ್ಟಿ 1 ಮತ್ತು ಪಟ್ಟಿ 2ನ್ನು ಹೋಲಿಸಿ ಕೆಳಗೆ ನೀಡಿರುವ ಉತ್ತರಗಳ ಗುಂಪಿನಲ್ಲಿ ಸರಿಹೊಂದುವುದನ್ನು ಗುರುತಿಸಿ:

| ಪಟ್ಟಿ-1 (ಕೃತಿಗಳು) | ಪಟ್ಟಿ-2 (ಛಾಷೆ) |
|---|---|
| A. ತೊರವೆ ರಾಮಾಯಣ | I. ತ್ರಿಪದಿ |
| B. ಅಂಜನಾ ಚರಿತ್ರೆ | II. ಷಟ್ಪದಿ |
| C. ಅನುಭವ ಸಾರ | III. ಸಾಂಗತ್ಯ |
| D. ಕಬ್ಬಿಗರ ಕಾವ್ಯ | IV. ಚಂಪೂ |

ಸರಿ ಉತ್ತರವನ್ನು ಆರಿಸಿರಿ:

(1) I IV II III

(2) II III I IV

(3) II III IV I

(4) I II III IV

29. ಡಾ. ಶಿವರಾಂ 'ರಾಶಿ' ಹೆಸರಿನಿಂದ ಪ್ರಕಟಿಸುತ್ತಿದ್ದ ಹಾಸ್ಯ ಕನ್ನಡ ಪತ್ರಿಕೆ

(1) ಕೊರವಂಜಿ

(2) ಚಿಂಗಾರಿ

(3) ಹಾಸ್ಯ ರಸಾಯನ

(4) ನಗಿಸೋಣ ಬನ್ನಿ

30. ಯೋಗಾಂಗ ತ್ರಿಪದಿ ಗ್ರಂಥ ಕರ್ತೃ

(1) ಸರ್ವಜ್ಞ

(2) ಸಂಚಿ ಹೊನ್ನಮ್ಮ

(3) ಹೆಳವನಕಟ್ಟೆ ಗಿರಿಯಮ್ಮ

(4) ಅಕ್ಕಮಹಾದೇವಿ

ಸೂಚನೆಗಳು : ಕೆಳಗೆ ಕೊಟ್ಟಿರುವ ಉದ್ಧೃತ ಭಾಗವನ್ನು ಓದಿ, ಅರ್ಥ ಗ್ರಹಿಸಿ ಕೇಳಲಾದ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಗುರುತಿಸಿ (ಪ್ರಶ್ನೆಸಂಖ್ಯೆ 31-34) :

ಉದ್ಧೃತ ಭಾಗ

ಹೊಸ ತಿಳುವಳಿಕೆಯೊಂದು ಹೊಸತೊಂದು ವಿಚಾರವನ್ನು ಅನ್ವೇಷಿಸಿದರೆ, ವಿಜ್ಞಾನ ಜಗತ್ತಿನಲ್ಲಿ ಅಷ್ಟೇಕೆ, ಬೌದ್ಧಿಕ ಜಗತ್ತಿನಲ್ಲಿ ಅದನ್ನು ಸಮಕಾಲೀನ ಚಿಂತರಕೊಡನೆ, ಓದುಗರೊಡನೆ ಹಂಚಿಕೊಳ್ಳುವುದು ಎಲ್ಲಾ ಜ್ಞಾನದಾಹಿಗಳ, ಅನ್ವೇಷಕರ ಪರಿಪಾಠ. ಜ್ಞಾನವು ವಿಕಾಸಗೊಳ್ಳಲು ಇದು ಅತ್ಯಂತ ಅವಶ್ಯಕವೂ ಹೌದು. ಅನ್ವೇಷಿತ ಜ್ಞಾನವನ್ನು ಜನತೆಯ ಉಪಯೋಗಕ್ಕಾಗಿ ಬಳಸುವುದು, ಅದರಿಂದ ಪ್ರಯೋಜನ ಪಡೆಯುವುದು ಬಹು ಮುಖ್ಯವಾದ ಅಂಶ. ಹಾಗೆಯೇ ಅನ್ವೇಷಕರ ಪ್ರಯತ್ನಕ್ಕೂ, ಜ್ಞಾನಕ್ಕೂ ಸಲ್ಲಬೇಕಾದ ಮರ್ಯಾದೆ ಸಲ್ಲುವುದೂ ಅಷ್ಟೇ ಸೂಕ್ತ. ಆದರೆ ಇದೊಂದು ಅಪ್ಪಟ ಮಾರುಕಟ್ಟೆಯ ನಿರ್ವಹಣೆಯ ಮಾದರಿಯಾಗ ಬಾರದು. ಸಂಶೋಧಕರು ಸತ್ಯವನ್ನೇ ಪ್ರತಿಪಾದಿಸುತ್ತಾರೆ. ಮತ್ತು ತನಗೆ ಸಲ್ಲಬೇಕಾದ ಗೌರವವನ್ನಷ್ಟೇ



downloaded from: www.kpscvaani.com
Scanned by CamScanner

ಅಪೇಕ್ಷಿಸುತ್ತಾರೆ. ಆದರೆ ಆತ ಇದಕ್ಕೆ ಹೊರತಾಗಿ ಲಾಭದಾಯಕ ವಸ್ತುವನ್ನಾಗಿ ಏಕಸ್ವಾಮ್ಯವನ್ನಾಗಿಸಿಕೊಂಡರೆ, ಅದರಿಂದ ನಿರೀಕ್ಷಿತ ಸಾರ್ವಜನಿಕ ಒಳಿತು ಉಂಟಾಗಲಾರದು. ಬದಲಾಗಿ ಇಡೀ ಜ್ಞಾನವು ಅನ್ವೇಷಕನ ಸ್ವತ್ತಾಗಿ ಅಥವಾ ಒಂದು ಕುಟುಂಬದ ಜ್ಞಾನವಾಗಿ ಅವರೇಳಿಗೆ-ಲಾಭವನ್ನಷ್ಟೇ ಉತ್ತೇಜಿಸಿ ಬೆಳೆಯುತ್ತದೆ. ಇಂತಹ ಅನಾಹುತಗಳಿಂದ ರಕ್ಷಿಸಿ, ಅನ್ವೇಷಕರ ಅನ್ವೇಷಣೆಯು ಸಮಾಜದ ಅಥವಾ ಸಾರ್ವಜನಿಕ ಭಾಗವಾಗಬೇಕಾಗುತ್ತದೆ. ಇಂತಹ ಏಕಸ್ವಾಮ್ಯವನ್ನು ತಪ್ಪಿಸುವ ಸದುದ್ದೇಶದಿಂದಲೇ ಪೇಟೆಂಟ್ ವಿಕಾಸಗೊಳ್ಳುತ್ತಾ ಬಂದಿದೆ. ಪೇಟೆಂಟ್ ಮಾಡುವುದೆಂದರೆ ಯಾರಿಗೂ ಹೇಳಬಾರದೆಂಬ ವ್ಯಾಖ್ಯಾನಗಳಿವೆ.

ಪೇಟೆಂಟ್ ಎಂದರೇನು? ಅದನ್ನು ಪಡೆಯುವುದು ಹೇಗೆ? ಪೇಟೆಂಟ್ ಪಡೆದಾಕ್ಷಣ ಹಣ ಬರುವುದೇ? ಎಂಬೆಲ್ಲಾ ಪ್ರಶ್ನಾಪೂರ್ವ ಅನುಮಾನಗಳು ಕಾಡುತ್ತಿವೆ. ಬಹುಶಃ ಪೇಟೆಂಟ್ ಕುರಿತ ವಿಚಾರಗಳು ಕಳೆದ ದಶಕದಿಂದ ಚರ್ಚೆಯಲ್ಲಿರುವ ವಿಚಾರಗಳಾದರೂ, ಮೂಲಭೂತ ವಿವರಗಳನ್ನು ನಾವು ಸಾರ್ವಜನಿಕ ತಿಳುವಳಿಕೆಗೆ ಬಿಟ್ಟಿಲ್ಲ. ನಮ್ಮ ಅಭಿವೃದ್ಧಿ ಚಿಂತನಾ ಕ್ರಮವೇ ವಸಾಹತುಶಾಹಿ ಮನೋಧರ್ಮದ್ದು. ಗುಲಾಮತನದ ವೈಭವೀಕರಣವೇ ಆಧುನಿಕತೆಯನ್ನು ಆಳುತ್ತಿರುವುದರಿಂದ ಇದರ ಮಾರ್ಗ ದುರಂತಗಳ ಕಡೆಗೆ ಸಾಗುತ್ತಿರುತ್ತದೆ. ಆದ ಕಾರಣದಿಂದ ಈ ಮೂಲಭೂತ ವಿಚಾರಗಳಿಂದ ಇಡೀ ಪೇಟೆಂಟ್ ಜಗತ್ತನ್ನು ಅರಿಯುವುದು ಸಮಂಜಸವಾಗಿದೆ.

ಒಂದು ದೇಶದ ಅಭಿವೃದ್ಧಿಯ ಆಯಾಮಗಳು ಆ ದೇಶದ ಸಂಪತ್ತು ಮತ್ತು ಸಂಶೋಧನಾ ಫಲಗಳು. ವ್ಯಾಪಾರಿಕ ಸಾಮರ್ಥ್ಯ ಅವುಗಳನ್ನು ಅಳತೆಗೋಲಾಗಿ ಬಳಸುತ್ತದೆ. ಸಾಲದ್ದಕ್ಕೆ ಅದಕ್ಕೊಂದು ಜಾಗತಿಕ ವಹಿವಾಟಾಗಿ ರೂಪುಗೊಂಡಾಗ ಮತ್ತಷ್ಟು ಮಹತ್ವ ಬರುವುದು. ಹಾಗಾಗಿ ಅನ್ವೇಷಣೆಗಳನ್ನು ವಹಿವಾಟಿನಲ್ಲಿ ತೊಡಗಿಸುವುದು ಅಭಿವೃದ್ಧಿ ದೃಷ್ಟಿಯಿಂದ ಮುಖ್ಯವಾಗಿರುತ್ತದೆ. ಇವುಗಳ ನಡುವಿನ ಎಲ್ಲಾ ಆಯಾಮಗಳ ಸಂಬಂಧಗಳನ್ನು ಎಲ್ಲಾ ಮಟ್ಟಗಳಲ್ಲೂ ಕಾಪಾಡಿಕೊಳ್ಳುವುದು ಮುಖ್ಯ. ಆದ್ದರಿಂದ ಅನ್ವೇಷಣೆ-ತಂತ್ರ-ಜ್ಞಾನ-ವಹಿವಾಟು-ಉದ್ಯಮ - ಇವುಗಳ ನಡುವಿನ ಸಂಬಂಧಗಳನ್ನು ಕಾಪಾಡುವ ಹೊಣೆಗಾರಿಕೆಯನ್ನು ಪೇಟೆಂಟ್ ನಿರ್ವಹಿಸುತ್ತದೆ. ಪೇಟೆಂಟ್ ಎಂಬ ಹೊಸತೊಂದು ಪರಿಕಲ್ಪನೆಯು ಹೊಸತೊಂದು ಅನ್ವೇಷಣೆಗೆ ಸ್ವಾಮ್ಯವನ್ನು ಕೊಡುವ ಹಕ್ಕಿನ ರೂಪದಲ್ಲಿ ಹುಟ್ಟಿತು. ಮೂಲತಃ ಅನ್ವೇಷಕನ ಸ್ವಾಮ್ಯದ ಹಕ್ಕನ್ನು ಪ್ರತಿಪಾದಿಸಲು ಹುಟ್ಟಿಕೊಂಡ ಪೇಟೆಂಟ್, ಅದನ್ನು ಸೀಮಿತ ಅವಧಿಗೆ ಮಾತ್ರ ವಹಿವಾಟಿನಲ್ಲಿ ಬಳಸುವ ಮಿತಿಯುಳ್ಳ ಹಕ್ಕನ್ನು ನೀಡಲು ಮಾತ್ರ ಅನ್ವಯವಾಯಿತು. ಆಗ ಹಕ್ಕು ಒಂದು ಸೀಮಿತ ಅವಧಿಯಲ್ಲಿ ಲಾಭ ಪಡೆಯುವುದಕ್ಕೆ ಮಾತ್ರ ಚಲಾವಣೆಯಲ್ಲಿರುತ್ತದೆ. ಈ ರೀತಿ ವಿಕಾಸಗೊಂಡದ್ದೇ ಪೇಟೆಂಟ್‌ನಲ್ಲಿರುವ ಸಾರ್ವಜನೀಕರಣ ನೀತಿ. ಇಲ್ಲವಾದಲ್ಲಿ ಲಾಭವನ್ನು ಅನ್ವೇಷಕರು ಜೀವಮಾನ ಪೂರ್ತಿ ಪಡೆಯಬಹುದಿತ್ತು. ಅಂತಹ ಏಕಸ್ವಾಮ್ಯದಿಂದ ಹೊರಬರುವಂತೆ ಪ್ರೇರೇಪಿಸುವುದೇ ಪೇಟೆಂಟ್ ಮಾಡುವುದಾಗಿದೆ. ಆದರೆ ಅದನ್ನು ಉತ್ಪಾದನೆಗೊಳ



downloaded from: www.kpscvaani.com
Scanned by CamScanner

ಪಡಿಸುವುದು ಅನ್ವೇಷಕನ ಕೆಲಸ. ಇದರಿಂದ ಮಾತ್ರವೇ ಆತ ಲಾಭ ಪಡೆಯಲು ಸಾಧ್ಯವಿರುವುದು. ಅಲ್ಲದೆ ಸಾರ್ವಜನಿಕವಾಗಿ ಮಾರಾಟವಾಗುವ ಉತ್ಪನ್ನವು ಕಡ್ಡಾಯವಾಗಿ ಮಾರುಕಟ್ಟೆ ನಿರ್ವಹಣಾ ಕಾಯ್ದೆಯಡಿ ನೋಂದಣಿ ಪಡೆದಿರಲೇಬೇಕಾಗುವುದು. ಈ ಮೂಲಕ ಉತ್ಪತ್ತಿಯ ಮಾಹಿತಿಯನ್ನು ಅಂದಾಜು ಮಾಡಲು ಸಾಧ್ಯವಾಗುತ್ತದೆ.

ಪೇಟೆಂಟ್ ಮಾಡಿರುವೆ ಎಂದಾಕ್ಷಣ ಯಾರಿಗೂ ಹೇಳಬಾರದ ಗುಟ್ಟನ್ನು ಉಳಿಸಿಕೊಂಡಿದ್ದಾನೆ ಎಂಬ ಅರ್ಥವಿದೆ. ಆದರೆ ವಾಸ್ತವವಾಗಿ ಪೇಟೆಂಟ್ ಮಾಡುವಾಗ ಎಲ್ಲಾ ಪ್ರಕ್ರಿಯೆಗಳ ವಿವರಗಳನ್ನು ತನ್ನ ಕಛೇರಿಯಲ್ಲಿ ತಿಳಿಸಲೇಬೇಕಾದ ಅನಿವಾರ್ಯವಿದೆ. ಪೇಟೆಂಟ್ ಎಂದರೆ ಯಾರಿಗೂ ಹೇಳದೆ ನಮ್ಮೊಳಗೆ ಕೊನೆಯಾಗುವುದು ಎಂದೇನೂ ಅಲ್ಲ. ಪೇಟೆಂಟ್ ಅವಧಿಯ ಕೊನೆಯಲ್ಲಿ ಆ ಜ್ಞಾನವು ಸಾರ್ವಜನಿಕವಾಗುತ್ತದೆ. ಅದನ್ನು ಬಹಿರಂಗಪಡಿಸಲಾಗುತ್ತದೆ. ನಂತರ ಅದರ ಏಕಸ್ವಾಮ್ಯವೂ ತಪ್ಪುತ್ತದೆ. ಈ ಸೀಮಿತ ಅವಧಿಯಲ್ಲಿ ಅದರ ಉತ್ಪನ್ನ ಆರಂಭಿಸಿದ ಕಂಪನಿ ಅಥವಾ ವ್ಯಕ್ತಿಯಿಂದ ಲಾಭದ ಒಂದಂಶ ಅಥವಾ ನಿಗದಿಯಾದ ಮೌಲ್ಯದಷ್ಟನ್ನು ಅನ್ವೇಷಕನು ಗೌರವ ರೂಪದಲ್ಲಿ ಪಡೆಯುತ್ತಾನೆ. ಇದನ್ನೇ - ಬೌದ್ಧಿಕ ಆಸ್ತಿ - ಎಂದು ಕರೆಯಲಾಗಿದೆ.

**31.** ಉದ್ಧೃತ ಭಾಗದ ಮೇರೆಗೆ 'ದೇಶದ ಅಭಿವೃದ್ಧಿ' ಎನ್ನುವುದು

(1) ನಮ್ಮ ಚಿಂತನಾಕ್ರಮ ವಸಾಹತು ಮನೋಧರ್ಮದ್ದು

(2) ಅನ್ವೇಷಣೆಗಳನ್ನು ವಹಿವಾಟಿನಲ್ಲಿ ತೊಡಗಿಸುವುದು

(3) ಸಂಪತ್ತು ಮತ್ತು ಸಂಗ್ರಹಗಳ ಫಲಗಳು

(4) ವ್ಯಾವಹಾರಿಕ ಸಂಬಂಧಗಳನ್ನು ಕಡಿತಗೊಳಿಸುವುದು

**32.** 'ಪೇಟೆಂಟ್' ಎಂದರೆ ಈ ಕೆಳಗಿನವುಗಳಲ್ಲಿ ಯಾವುದು ಅನ್ವಯಿಸುವುದಿಲ್ಲ?

(1) ಮಾರುಕಟ್ಟೆ ನಿರ್ವಹಣಾ ಕಾಯ್ದೆಯಡಿ ನೋಂದಣಿ ಪಡೆದಿರಬೇಕು.

(2) ಏಕಸ್ವಾಮ್ಯದಿಂದ ಹೊರಬರುವಂತೆ ಪ್ರೇರೇಪಿಸುವುದು

(3) ಇದು ಯಾರಿಗೂ, ಎಂದಿಗೂ ಗುಟ್ಟಾಗಿ ಇಡುವಂತಿಲ್ಲ

(4) ಶಾಶ್ವತ ಹಕ್ಕು ಎಂದು ಭಾವಿಸುವುದು

**33.** ಉದ್ಧೃತ ಭಾಗದಲ್ಲಿ ಹೇಳಿರುವಂತೆ - ಬೌದ್ಧಿಕ ಆಸ್ತಿ - ಎಂದರೆ

(1) ಸಲ್ಲಬೇಕಾದ ಗೌರವ ಮತ್ತು ಸತ್ಯವನ್ನು ಪ್ರತಿಪಾದಿಸುವುದು

(2) ಗ್ರಂಥಗಳನ್ನು ಪ್ರಕಟಿಸುವುದು

(3) ಹಣ ಮತ್ತು ಆಸ್ತಿಯನ್ನು ಗಳಿಸುವುದು

(4) ಸಮಕಾಲೀನ ಚಿಂತಕರೊಡನೆ ಚರ್ಚಿಸದೆ ಇರುವುದು



downloaded from: www.kpscvaani.com
Scanned by CamScanner

34. ಉದ್ಧೃತ ಭಾಗದ ಮೇರೆಗೆ ಅನ್ವೇಷಕನ ಉದ್ದೇಶ

(1) ಸಂಶೋಧನೆಗಳನ್ನು ಮಾಡದಿರುವುದು

(2) ಗುಲಾಮತನವನ್ನು ವೈಭವೀಕರಿಸುವುದು

(3) ಸತ್ಯವನ್ನು ಸಾರ್ವಜನಿಕರಿಗೆ ತಿಳಿಸದೆ ಇರುವುದು

(4) ಮೇಲಿನ ಯಾವುದೂ ಅಲ್ಲ

ಸೂಚನೆಗಳು : ಕೆಳಗಿನವುಗಳಲ್ಲಿ ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿರಿ
(ಪ್ರಶ್ನೆ ಸಂಖ್ಯೆ 35-40):

35. ನೋಡಂ ನೋಡಂ ಎಂಬುದು ________

(1) ವೃತ್ತ್ಯಾನುಪ್ರಾಸ

(2) ಯಮಕ

(3) ಚಿತ್ರಕವಿತ್ವ

(4) ಛೇಕಾನುಪ್ರಾಸ

36. ಅಯ್ಯೋ ಅಕಟಕಟಾ ಎಂಬುದು ________

(1) ಸಂಬಂಧವಾಚಕಾವ್ಯಯ

(2) ಭಾವಸೂಚಕಾವ್ಯಯ

(3) ಅನುಸರ್ಗಾವ್ಯಯ

(4) ಕೃದಂತಾವ್ಯಯ

37. ________ ಇದು ಅಚ್ಚಗನ್ನಡ ಛಂದಸ್ಸಿನ ಮಟ್ಟು ಆಗಿದೆ.

(1) ಚಂಪೂ

(2) ರಗಳೆ

(3) ಷಟ್ಪದಿ

(4) ಸಾಂಗತ್ಯ

38. ಪ್ರಾಸಾಕ್ಷರದ ಹಿಂದಿನ ಅಕ್ಷರವು ದೀರ್ಘಸ್ವರಯುಕ್ತವಾಗಿದ್ದರೆ ಅದು ________

(1) ಸಿಂಹ ಪ್ರಾಸ

(2) ಅಜ ಪ್ರಾಸ

(3) ಗಜ ಪ್ರಾಸ

(4) ಶರಭ ಪ್ರಾಸ

39. 'ತಾನ್' ಎಂಬುದು ಈ ಕೆಳಗಿನ ________ ಪದ.

(1) ಪುರುಷಾರ್ಥಕ ಸರ್ವನಾಮ

(2) ಪ್ರಶ್ನಾರ್ಥಕ ಸರ್ವನಾಮ

(3) ಆತ್ಮಾರ್ಥಕ ಸರ್ವನಾಮ

(4) ಯಾವುದೂ ಅಲ್ಲ

40. ನಾಮಪದದ ಮೂಲರೂಪ ________

(1) ಪ್ರತ್ಯಯ

(2) ಕ್ರಿಯಾ

(3) ಪ್ರಕೃತಿ

(4) ಧಾತು



downloaded from: www.kpscvaani.com
Scanned by CamScanner

ಸೂಚನೆಗಳು : ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ 41-45) ಖಾಲಿ ಬಿಟ್ಟಿರುವ ಜಾಗವನ್ನು ತುಂಬಲು ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದುದನ್ನು ಗುರುತಿಸಿ :

ಉದಾಹರಣೆ : ಮೀನ್ ಎಂದರೆ

(1) ಹೊಳೆಯುವ

(2) ಮೀಯು

(3) ಮೇಯು

(4) ಆಕಾಶ

ಇಲ್ಲಿ 'ಹೊಳೆಯುವ' ಎಂಬುದು 'ಮೀನ್'ನ ಅರ್ಥವನ್ನು ಹೇಳುವ ಪದ. ಆದುದರಿಂದ (1)ನ್ನು ಗುರುತಿಸಬೇಕು.

41. ಇಕ್ಷುಚಾಪಧರ ಎಂದರೆ

(1) ವಿಷ್ಣು

(2) ರಾಮ

(3) ಅರ್ಜುನ

(4) ಮನ್ಮಥ

42. 'ವಾಜಿ' ಎಂದರೆ

(1) ಸುಗಂಧ

(2) ಅಶ್ವ

(3) ಜಿಂಕೆ

(4) ಹಸು

43. 'ನಿರ್ವೇಗ' ಎಂದರೆ

(1) ವಿರಕ್ತಿ

(2) ತ್ವರೆ

(3) ಹೆಚ್ಚಿನ ವೇಗ

(4) ಆಸಕ್ತಿ

44. 'ಬೋನ' ಶಬ್ದದ ಅರ್ಥ

(1) ಬೋನು

(2) ಬಾನು

(3) ನಾನು

(4) ಅನ್ನ

45. 'ತೃಷೆ' ಎಂದರೆ

(1) ಹಸಿವು

(2) ಬಾಯಾರಿಕೆ

(3) ಸುಳ್ಳು

(4) ಮೃಗಜಲ



downloaded from: www.kpscvaani.com
Scanned by CamScanner

ಸೂಚನೆಗಳು : ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಸಮಾನವಾದ ಅಂಶವಿರುವ ಮೂರು ಪದಗಳಿವೆ. ಭಿನ್ನವಾಗಿ ಉಳಿದಿರುವ ಪದವನ್ನು ಗುರುತಿಸಿ (ಪ್ರಶ್ನೆಸಂಖ್ಯೆ **46-51**) :

ಉದಾಹರಣೆ :

(1) ಚುನಾವಣೆ

(2) ಆಸ್ಪತ್ರೆ

(3) ಮುಖ್ಯಮಂತ್ರಿ

(4) ಭಾಷಣ

ಇವುಗಳಲ್ಲಿ (1), (3), (4) ರಾಜಕೀಯಕ್ಕೆ ಸಂಬಂಧಿಸಿದ ಪದಗಳು. ಭಿನ್ನರೂಪ (2) ಆಸ್ಪತ್ರೆ. ಆದ್ದರಿಂದ (2)ನ್ನು ಗುರುತಿಸಬೇಕು.

**46.** (1) ಮುರಿದ

(2) ಒಡೆದ

(3) ವಿಚ್ಛಿನ್ನ

(4) ಅವಿಚ್ಛಿನ್ನ

**47.** (1) ದಾರಿ

(2) ಹಾದಿ

(3) ಬೀದಿ

(4) ವಿಧಿ

**48.** (1) ನವಣೆ

(2) ಸಜ್ಜೆ

(3) ಗೋಧಿ

(4) ಉದ್ದು

**49.** (1) ತರು

(2) ಕರು

(3) ಮರ

(4) ಬಳ್ಳಿ

**50.** (1) ಸದನ

(2) ಆಲಯ

(3) ನಿಕೇತನ

(4) ನಂದನ

**51.** (1) ಪಂಪ

(2) ಪೊನ್ನ

(3) ರನ್ನ

(4) ಹರಿಹರ



downloaded from: www.kpscvaani.com

Scanned by CamScanner

ಸೂಚನೆಗಳು : ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಒಂದು ಮಾತ್ರ ಅಚ್ಚಕನ್ನಡಪದ. ಉಳಿದ ಮೂರು ಅನ್ಯ ಭಾಷಾ ಪದಗಳು. ಕನ್ನಡ ಪದವನ್ನು ಗುರುತಿಸಿ (ಪ್ರಶ್ನೆ ಸಂಖ್ಯೆ 52-55) :

ಉದಾಹರಣೆ :

(1) ಮೂಡಣ

(2) ಪೋಲೀಸ್

(3) ಖಾನಾವಳಿ

(4) ಸಾಬೂನು

ಇಲ್ಲಿ 'ಮೂಡಣ' ಎಂಬುದು ಅಚ್ಚ ಕನ್ನಡ ಪದ. ಆದುದರಿಂದ (1) ನ್ನು ಗುರುತಿಸಬೇಕು.

52. (1) ಚಾವಿ
(2) ಚೌಳು
(3) ಚಳಿ
(4) ಚಾಲು

53. (1) ಬಡವಿ
(2) ಬಡತಿ
(3) ಬಟಾಣಿ
(4) ಬತೇರಿ

54. (1) ಹಿಮ್ಮತ್ತು
(2) ಹುಂಡಿ
(3) ಹುದ್ದೆ
(4) ಹಿತ್ತಲು

55. (1) ರೆಕ್ಕೆ
(2) ಕಚೇರಿ
(3) ಪಗಾರ
(4) ಕೋರ್ಟು

ಸೂಚನೆಗಳು : ಈ ಕೆಳಗೆ ಕೆಲವು ಕನ್ನಡದ ನುಡಿಗಟ್ಟುಗಳನ್ನು ಅವುಗಳ ಮುಂದೆ ನಾಲ್ಕು ಪರ್ಯಾಯ ರೂಪಗಳನ್ನು ನೀಡಿದೆ. ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವನ್ನು ಆಯ್ಕೆಮಾಡಿ ಗುರುತಿಸಿ (ಪ್ರಶ್ನೆ ಸಂಖ್ಯೆ 56-59) :

ಉದಾಹರಣೆ : 'ಕರತಲಾಮಲಕ'

(1) ಕೈಚಳಕ ತೋರು

(2) ಚೆನ್ನಾಗಿ ತಿಳಿದುಕೊಂಡದ್ದು

(3) ಕೈಯಿಂದ ಮುಖದ ತನಕ

(4) ಗೊತ್ತು ಎಂಬ ಅಹಂಕಾರ

ಇಲ್ಲಿ 'ಚೆನ್ನಾಗಿ ತಿಳಿದುಕೊಂಡದ್ದು' ಎಂಬುದು ಸರಿಯಾದ ಅರ್ಥ. ಆದುದರಿಂದ (2) ನ್ನು ಗುರುತಿಸಬೇಕು.

56. 'ಕಾಲುಕೀಳು' ನುಡಿಗಟ್ಟಿನ ಅರ್ಥ
(1) ಕಾಲು ಮುರಿ
(2) ಕಾಲೂರು
(3) ಮುಗಿಬೀಳು
(4) ಓಡಿಹೋಗು



downloaded from: www.kpscvaani.com
Scanned by CamScanner

57. 'ಚಳ್ಳೆಹಣ್ಣು ತಿನ್ನಿಸು' ಈ ನುಡಿಗಟ್ಟಿನ ಅರ್ಥ

(1) ಹಣ್ಣನ್ನು ತಿನ್ನಿಸು

(2) ಕೈಗೆ ಸಿಕ್ಕುಬೀಳು

(3) ಕೈಗೆ ಸಿಕ್ಕದಂತೆ ಓಡಾಡು

(4) ಕಾಯಿ ತಿನ್ನಿಸು

58. 'ಕಿಡಿಕಾರು' ಈ ನುಡಿಗಟ್ಟಿನ ಅರ್ಥ

(1) ಬೆಂಕಿ ಹಚ್ಚು

(2) ಮತ್ಸರಪಡು

(3) ಸಿಟ್ಟಿಗೇಳು

(4) ಬೆಂಕಿ ಕಾರು

59. 'ಎತ್ತಿದ ಕೈ' ಎಂದರೆ

(1) ಎಬ್ಬಿಸು

(2) ಎಚ್ಚರಿಸು

(3) ಎತ್ತರಕ್ಕೇರಿಸು

(4) ಪ್ರವೀಣ

**ಸೂಚನೆಗಳು : ಈ ಕೆಳಗೆ ಕೊಟ್ಟಿರುವ ಪದಗಳಿಗೆ (ಪ್ರಶ್ನೆ ಸಂಖ್ಯೆ 60-65) ವಿರುದ್ಧಾರ್ಥಕ ಪದಗಳನ್ನು ಗುರುತಿಸಿ :**

ಉದಾಹರಣೆ : ಅಂತರ್ವಾಣಿ

(1) ಹೊರವಾಣಿ

(2) ದುರ್ವಾಣಿ

(3) ಬಹಿರ್ವಾಣಿ

(4) ಒಳಗಿನ ವಾಣಿ

ಇಲ್ಲಿ 'ಬಹಿರ್ವಾಣಿ' ಸರಿಯಾದ ಉತ್ತರ. ಆದುದರಿಂದ (3) ನ್ನು ಗುರುತಿಸಬೇಕು.

60. ನೀರವ

(1) ಹಿತಕರ

(2) ನಿಶ್ಶಬ್ದ

(3) ರವ

(4) ಅನುಸ್ವರ

61. ಬಹುಸ್ವಾಮ್ಯ

(1) ಕೃತಿಸ್ವಾಮ್ಯ

(2) ಬಹುವಿಧ

(3) ಏಕಸ್ವಾಮ್ಯ

(4) ಸರ್ವಾಧಿಕಾರತ್ವ



downloaded from: www.kpscvaani.com Scanned by CamScanner

62. ಅನಿಕೇತನ

(1) ಸ್ವನಿಕೇತನ

(2) ವಿನಿಕೇತನ

(3) ಸುನಿಕೇತನ

(4) ನಿಕೇತನ

63. ಊರ್ಧ್ವಮುಖಿ

(1) ಅಭಿಮುಖಿ

(2) ಹಿಮ್ಮುಖಿ

(3) ಅಧೋಮುಖಿ

(4) ಮುಮ್ಮುಖಿ

64. ನಿಸ್ತೇಜ

(1) ದುಸ್ತೇಜ

(2) ಊರ್ಜಿತತೇಜ

(3) ಅಸ್ತೇಜ

(4) ಅಪಸ್ತೇಜ

65. ಕ್ಷಮ್ಯ

(1) ಸಕ್ಷಮ್ಯ

(2) ಅಕ್ಷಮ್ಯ

(3) ಅಸಕ್ಷಮ್ಯ

(4) ಕ್ಷಮೆ

**ಸೂಚನೆಗಳು :** *ಕೆಳಗಿನ ಪದಗಳಿಗೆ ಅವುಗಳ ಮುಂದೆ ಸೂಚಿಸಿದ ಪರ್ಯಾಯ ರೂಪಗಳಲ್ಲಿ ಸಮಾನಾರ್ಥಕವಾದ ಅಥವಾ ಅತಿ ಸಮೀಪದ ಅರ್ಥವುಳ್ಳ ರೂಪಗಳನ್ನು ಗುರುತಿಸಿ (ಪ್ರಶ್ನೆ ಸಂಖ್ಯೆ 66-70) :*

**ಉದಾಹರಣೆ :** ಕಾನನ ಪದದ ಸಮಾನಾರ್ಥಕ

(1) ಕತ್ತಲು

(2) ತೋಟ

(3) ಕಾಡು

(4) ಕಾಡುವುದು

ಇಲ್ಲಿ 'ಕಾಡು' ಎಂಬುದು ಸರಿಯಾದ ಉತ್ತರ. ಆದುದರಿಂದ (3) ನ್ನು ಗುರುತಿಸಬೇಕು.

66. 'ಪನ್ನಗ' ಇದರ ಸಮಾನಾರ್ಥಕ ಪದ

(1) ವಿಷ್ಣು

(2) ಶಿವ

(3) ಗರುಡ

(4) ಹಾವು



downloaded from: www.kpscvaani.com

Scanned by CamScanner

67. 'ಮಧುಪ' _____

(1) ಮದ್ಯಪಾನಿ

(2) ಸೊಕ್ಕಿನವ

(3) ಧನವಂತ

(4) ಮಂದ

68. 'ಬೆಸಲ್'ನ ಸಮಾನಾರ್ಥಕ

(1) ಹೆರಿಗೆ

(2) ಬಿಸಿಲು

(3) ಹೇಳು

(4) ಅರಿವು

69. 'ನೂಪುರ' ಇದರ ಸಮಾನಾರ್ಥಕಗಳು

(1) ನೃತ್ಯ, ನರ್ತನ

(2) ನಲವ, ನಲಿತ

(3) ಕಾಲ್ಗಡಗ, ಕಾಲಂದುಗೆ

(4) ನಾಟಕ, ನಾಂದಿ

70. ಸಂಪೂರ್ಣವಾಗಿ ಸಮಾನಾರ್ಥಕ ಪದಗಳಿರುವ ಗುಂಪು

(1) ಭೋಗಿ, ಭುಜಂಗ, ಅಹಿ, ಅಜಗರ

(2) ಬಲಭದ್ರ, ರತಿಪತಿ, ಮನೋರಥ, ಪರಿಸ್ರುತ

(3) ಸ್ವರ್ಣ, ಕನಕ, ಪೀತಾ, ಶಿಲೆ

(4) ಸಲಗ, ಆನೆ, ಗಜ, ಗಲ

ಸೂಚನೆಗಳು : ಕೆಳಗಿನ ಪದಗಳನ್ನು ಬಿಡಿಸಿ ಬರೆದಿದೆ. ಅವುಗಳಲ್ಲಿ ಸರಿಯಾದುದನ್ನು ಗುರುತಿಸಿ (ಪ್ರಶ್ನೆ ಸಂಖ್ಯೆ 71-73) :

71. 'ಬೆಣ್ಣೆ' ಪದದ ವಿಗ್ರಹ ರೂಪ

(1) ಬಳಿ + ಎಣ್ಣೆ

(2) ಬೆಳ್ + ನೆಯ್

(3) ಬೆಳ್ + ಎಣ್ಣೆ

(4) ಬಿಳಿಯ + ಎಣ್ಣೆ

72. 'ನಾಸಿಕಾಗ್ರ' ಈ ಪದವನ್ನು ಬಿಡಿಸಿ ಬರೆಯಿರಿ

(1) ನಾಸಿಕ + ಅಗ್ರ

(2) ನಾಸಿ + ಕಾಗ್ರ

(3) ನಾಸಿಕ + ಆಗ್ರ

(4) ನಾಸಿಕ + ಹಗ್ರ

73. 'ಸತ್ + ಆನಂದ' ಇದನ್ನು ಕೂಡಿಸಿ ಬರೆದಾಗ ಆಗುವ ರೂಪ

(1) ಸತ್ತಾನಂದ

(2) ಸತ್ಯಾನಂದ

(3) ಸದಾನಂದ

(4) ಸತ್ವಾನಂದ



downloaded from: www.kpscvaani.com
Scanned by CamScanner

ಸೂಚನೆಗಳು : ಮುಂದೆ ಕೊಡಲಾದ ನಾಲ್ಕು ರೂಪಗಳಲ್ಲಿ ಸರಿಯಾದುದನ್ನು ಗುರುತಿಸಿ (ಪ್ರಶ್ನೆ ಸಂಖ್ಯೆ 74-77) :

ಉದಾಹರಣೆ :

(1) ಗ್ರಹಸ್ಥ

(2) ಗೃಹಸ್ಥ

(3) ಗ್ರುಹಸ್ಥ

(4) ಗೃಹಸ್ಥ

ಇಲ್ಲಿ 'ಗೃಹಸ್ಥ' ಸರಿಯಾದ ಉತ್ತರ. ಆದುದರಿಂದ (2) ನ್ನು ಗುರುತಿಸಬೇಕು.

**74.** ಸರಿಯಾದ ಪದವನ್ನು ಗುರುತಿಸಿ:

(1) ಆಗುಂತಕ (2) ಅಗುಂತಕ
(3) ಆಗಂತುಕ (4) ಅಗಂತುಕ

**75.** (1) ಶಬ್ಧಭಂಡಾರ

(2) ಶಬ್ದಬಂಢಾರ

(3) ಶಬ್ದ ಭಂಡಾರ

(4) ಸುಧಾರಣೆ ಬೇಕಿಲ್ಲ

**76.** (1) ಸಾಂಧರ್ಭಿಕ

(2) ಸಾಂಧರ್ಬಿಕ

(3) ಸಾಂದರ್ಬಿಕ

(4) ಸಾಂದರ್ಭಿಕ

**77.** (1) ಜಿಗುಪ್ಸೆ (2) ಜುಗಪ್ಸೆ

(3) ಜುಕುಪ್ಸೆ (4) ಜಿಕುಪ್ಸೆ

ಸೂಚನೆಗಳು : ಕೆಳಗಿನ ವಾಕ್ಯಗಳಲ್ಲಿ ಗೆರೆ ಎಳೆಯಲಾದ ಪದಗ[ಳಲ್ಲಿ] ದೋಷವಿದ್ದರೆ ಅದನ್ನು ಸರಿಪಡಿಸಲು ಮುಂದೆ ಕೊಟ್ಟ[ಿರುವ] ಪರ್ಯಾಯ ರೂಪಗಳಲ್ಲಿ ಸೂಕ್ತವಾದುದನ್ನು ಗುರುತ[ಿಸಿ.] ದೋಷವಿಲ್ಲದಿದ್ದರೆ ಸುಧಾರಣೆ ಬೇಕಿಲ್ಲ, ಆಗ (4) ನ್ನು ಗುರು[ತಿಸಿ] (ಪ್ರಶ್ನೆ ಸಂಖ್ಯೆ 78-81) :

ಉದಾಹರಣೆ : ಮಕ್ಕಳು ಸಂಗೀತವನ್ನು ಸುಶ್ರಾವ್ಯವಾಗಿ <u>ಆಡಿದ[ರು]</u>

(1) ಹಾಡಿದರು

(2) ಆಲಿಸಿದರು

(3) ಮಾಡಿಸಿದರು

(4) ಆಲಿಸಿದರು

ಇಲ್ಲಿ 'ಆಡಿದರು' ಎಂಬುದು ದೋಷವಾಗಿದ್ದು 'ಹಾಡಿದರು' ಎಂದಿರಬೇಕು. ಆದುದರಿಂದ (1) ನ್ನು ಗುರುತಿಸಬೇಕು.

**78.** ಸೌಹಾರ್ದತೆ ಉತ್ತಮ <u>ನಾಗರೀಕ</u> ಸಮಾಜದ ಲಕ್ಷಣ.

(1) ನಗಾರೀಕ

(2) ನಾಗರಿಕ

(3) ನಾಗರೀಕಾ

(4) ಸುಧಾರಣೆ ಬೇಕಿಲ್ಲ

**79.** ಕನ್ನಡ ನಾಡು ನುಡಿ ಸಂಸ್ಕೃತಿಗಳ <u>ಸಂರ್ವಧನೆ</u>

(1) ಸಂರ್ವದನೆ

(2) ಸಂವರ್ದನೆ

(3) ಸಂವರ್ಧನೆ

(4) ಸುಧಾರಣೆ ಬೇಕಿಲ್ಲ



downloaded from: www.kpscvaani.com
Scanned by CamScanner

Pollution Control Board SDA 11/8/19

80. ಮಾನ್ಯ ಸಚಿವರು ಪ್ರಶಸ್ತ ಪ್ರಧಾನ ಮಾಡಿದರು.

(1) ಪ್ರಧಾಣ

(2) ಪ್ರದಾನ

(3) ಪ್ರದನ

(4) ಸುಧಾರಣೆ ಬೇಕಿಲ್ಲ

81. ರಾಮನು ಬೇಟೆಗೆ ಹೊರಟನೆಂದರೆ ದನುರ್‌ಧಾರಿಯಾದ ಲಕ್ಷ್ಮಣ ಅವನ ಹಿಂದೆ ಸಿದ್ಧ.

(1) ಧನುರ್‌ಧಾರಿ

(2) ಧನುರ್ಧಾರಿ

(3) ಧರ್ನುಧಾರಿ

(4) ಸುಧಾರಣೆ ಬೇಕಿಲ್ಲ

ಸೂಚನೆಗಳು : ಕೆಳಗಿನವುಗಳಲ್ಲಿ ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿರಿ (ಪ್ರಶ್ನೆ ಸಂಖ್ಯೆ 82-86):

82. 'ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ'

(1) ಅರ್ಥಾಂತರನ್ಯಾಸಾಲಂಕಾರ

(2) ಶ್ಲೇಷಾಲಂಕಾರ

(3) ದೃಷ್ಟಾಂತಾಲಂಕಾರ

(4) ಉಪಮಾಲಂಕಾರ

83. ಹೊಂಬಳ

(1) ರೂಢನಾಮ

(2) ಅನ್ವರ್ಥಕನಾಮ

(3) ಅಂಕಿತನಾಮ

(4) ಗ್ರಾಮನಾಮ

84. _______ ಎಂಬುದು ಸಂಬಂಧಕಾವ್ಯಯ.

(1) ಅಲ್ಲದೆ

(2) ಎಲೇ

(3) ಚೆನ್ನಾಗಿ

(4) ಸುಮ್ಮನೆ

85. 'ಒಂದೊಂದು' ಇದು _______ ಪದ.

(1) ಪಡೆನುಡಿ

(2) ಗಾದೆಮಾತು

(3) ಅನುಕರಣ

(4) ದ್ವಿರುಕ್ತಿ

86. ತ್ರಿಪದಿಯಲ್ಲಿ ಬ್ರಹ್ಮಗಣ ಬರುವ ಸ್ಥಾನ _______

(1) ಮೂರು ಮತ್ತು ಆರನೇ ಗಣ

(2) ಆರು ಮತ್ತು ಹತ್ತನೇ ಗಣ

(3) ಎಂಟು ಮತ್ತು ಹನ್ನೊಂದನೇ ಗಣ

(4) ನಾಲ್ಕು ಮತ್ತು ಏಳನೇ ಗಣ



downloaded from: www.kpscvaani.com
Scanned by CamScanner

ಸೂಚನೆಗಳು : ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 47-51) (1) (2) (3) ಎಂಬ ಗೆರೆ ಎಳೆದ ಭಾಗಗಳಿವೆ. ಈ ಯಾವುದೇ ಭಾಗದಲ್ಲಿ ವ್ಯಾಕರಣ, ಕಾಗುಣಿತ ಅಥವಾ ಚಿಹ್ನೆಗೆ ಸಂಬಂಧಿಸಿದ ದೋಷವಿದ್ದರೆ ಆ ಭಾಗವನ್ನು ಗುರ್ತಿಸಿ. ದೋಷವಿಲ್ಲದಿದ್ದರೆ 'ತಪ್ಪಿಲ್ಲ' ಎಂಬ ನಾಲ್ಕನೇ (4) ಭಾಗವನ್ನು ಗುರ್ತಿಸಿ:

ಉದಾಹರಣೆ :

ಈ ಜೀವಸೃಷ್ಟಿಗೆ ಪ್ರಕೃತಿ (1) ಕಾರಣವಾದಂತೆ (2) ಜೀವನಾಶಕ್ಕೂ ಪ್ರಕ್ರುತಿ ಕಾರಣವಾಗುತ್ತದೆ (3) ತಪ್ಪಿಲ್ಲ (4)

ಇದರ (3) ಭಾಗದಲ್ಲಿ ಪುನರಾವರ್ತನೆಯಾಗಿರುವ ಪ್ರಕೃತಿ ಪದ ತಪ್ಪು. ಆದುದರಿಂದ (3) ನ್ನು ತಪ್ಪೆಂದು ಭಾವಿಸಿ ಗುರುತಿಸಬಹುದು.

87. ಗಾದೆಗಳು (1) ಜೀವನದ (2) ಸಾರವಿದೆ (3) ತಪ್ಪಿಲ್ಲ (4)

88. ರಾಮನು (1) ಮರಕ್ಕೆ (2) ಏರಿ ಕುಳಿತಿದ್ದಾನೆ (3) ತಪ್ಪಿಲ್ಲ (4)

89. ವ್ಯಕ್ತಿ (1) ರಾಷ್ಟ್ರ (2) ದೊಡ್ಡದು (3) ತಪ್ಪಿಲ್ಲ (4)

90. ಮದುವೆ (1) ಸುಮೂಹೂರ್ತವಾಗಿ (2) ಜರುಗಿತು (3) ತಪ್ಪಿಲ್ಲ (4)

91. ಬಾಹ್ಯೈಕ್ಯತೆ (1) ಭಾರತೀಯರ (2) ಹುಟ್ಟುಗುಣ (3) ತಪ್ಪಿಲ್ಲ (4)

ಸೂಚನೆಗಳು : ಕೆಳಗಿನವುಗಳಲ್ಲಿ ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿರಿ (ಪ್ರಶ್ನೆ ಸಂಖ್ಯೆ 92-100):

92. _______ ಇವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಿಲ್ಲ.

(1) ಚಂದ್ರಶೇಖರ ಕಂಬಾರ

(2) ಗಿರೀಶ್ ಕಾರ್ನಾಡ್

(3) ಚಂದ್ರಶೇಖರ ಪಾಟೀಲ್

(4) ವಿನಾಯಕ ಕೃಷ್ಣ ಗೋಕಾಕ್

93. ಕನ್ನಡದಲ್ಲಿ ಪತ್ರಿಕೆಯೊಂದನ್ನು ಆರಂಭಿಸಿದ ಮೊತ್ತಮೊದಲ ಮಹಿಳಾ ಸಾಹಿತಿ

(1) ಟಿ. ನಾ. ಮಂಗಳಾ

(2) ಅನುಪಮ ನಿರಂಜನ

(3) ನಂಜನಗೂಡು ತಿರುಮಲಾಂಬ

(4) ಮಂಗಳಾ ಪ್ರಿಯದರ್ಶಿನಿ

94. ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು' – ಇದು ಯಾವ ಪ್ರಕಾರ?

(1) ಕಥಾ ಸಾಹಿತ್ಯ

(2) ಕಾದಂಬರಿ ಸಾಹಿತ್ಯ

(3) ಪ್ರಬಂಧ ಸಾಹಿತ್ಯ

(4) ಪ್ರವಾಸ ಸಾಹಿತ್ಯ



downloaded from: www.kpscvaani.com

Scanned by CamScanner

95. ಕೆಳಗಿನ ಯಾವ ಕೃತಿ ಯು.ಆರ್. ಅನಂತಮೂರ್ತಿಯವರದ್ದಲ್ಲ?

(1) ಸಂಸ್ಕಾರ

(2) ವಂಶ ವೃಕ್ಷ

(3) ಅವಸ್ಥೆ

(4) ಭವ

96. ಬೀchi ಇವರ ನಿಜವಾದ ಹೆಸರೇನು?

(1) ರಾಯಸಂ ಭೀಮಸೇನರಾವ್

(2) ಅಜ್ಜಂಪುರ ಸೀತಾರಾಮ

(3) ಚನ್ನಮಲ್ಲಪ್ಪ ಗಲಗಲಿ

(4) ಬೆಟಗೇರಿ ಕೃಷ್ಣಶರ್ಮ

97. 'ಕನ್ನಡ ಮಧ್ಯಮ ವ್ಯಾಕರಣ' ಪುಸ್ತಕ ಬರೆದವರು

(1) ತ.ಸು. ವೆಂಕಣ್ಣಯ್ಯ

(2) ತೀ.ನಂ. ಶ್ರೀಕಂಠಯ್ಯ

(3) ಟಿ.ವಿ. ವೆಂಕಟಾಚಲ ಶಾಸ್ತ್ರಿ

(4) ದ.ರಾ. ಬೇಂದ್ರೆ

98. ಕನ್ನಡ ಪತ್ರಿಕೋದ್ಯಮದ ಆರಂಭವನ್ನು ಯಾವ ಪತ್ರಿಕೆಯಿಂದ ಗುರುತಿಸಲಾಗುತ್ತದೆ?

(1) ಸಾಧ್ವಿ

(2) ಆಂದೋಲನ

(3) ಮಂಗಳೂರು ಸಮಾಚಾರ

(4) ಕೋಲಾರ ಪತ್ರಿಕೆ

99. 'ಅಭಿನವ ಕಾಳಿದಾಸ' ______

(1) ಟಿ.ಎಸ್. ವೆಂಕಣ್ಣಯ್ಯ

(2) ಆರ್. ನರಸಿಂಹಾಚಾರ್

(3) ಮಧುರ ಚೆನ್ನ

(4) ಬಸವಪ್ಪ ಶಾಸ್ತ್ರಿ

100. ಇವುಗಳಲ್ಲಿ ಯಾವ ಗುಂಪು ಸರಿಯಾದುದು?

(1) ಅ. ವಿದ್ಯಾಶಂಕರ ದೇವಾಲಯ - ಶೃಂಗೇರಿ
ಆ. ಲೇಪಾಕ್ಷಿ - ವೀರಭದ್ರಸ್ವಾಮಿ
ಇ. ತಾಡಪತ್ರಿ - ಚಿಂತಲರಾಯ
ಈ. ಹೂವಿನ ಹಡಗಲಿ - ಪಾಪನಾಥೇಶ್ವರ

(2) ಅ.ವಿದ್ಯಾಶಂಕರ ದೇವಾಲಯ-ಪಾಪನಾಥೇಶ್ವರ
ಆ. ಲೇಪಾಕ್ಷಿ - ವೀರಭದ್ರಸ್ವಾಮಿ
ಇ. ತಾಡಪತ್ರಿ - ಚಿಂತಲರಾಯ
ಈ. ಹೂವಿನ ಹಡಗಲಿ - ಶೃಂಗೇರಿ

(3) ಅ.ವಿದ್ಯಾಶಂಕರದೇವಾಲಯ-ಪಾಪನಾಥೇಶ್ವರ
ಆ. ಲೇಪಾಕ್ಷಿ - ಚಿಂತಲರಾಯ
ಇ. ತಾಡಪತ್ರಿ - ವೀರಭದ್ರಸ್ವಾಮಿ
ಈ. ಹೂವಿನ ಹಡಗಲಿ - ಶೃಂಗೇರಿ

(4) ಅ.ವಿದ್ಯಾಶಂಕರದೇವಾಲಯ-ಪಾಪನಾಥೇಶ್ವರ
ಆ. ಲೇಪಾಕ್ಷಿ - ಚಿಂತಲರಾಯ
ಇ. ತಾಡಪತ್ರಿ - ಶೃಂಗೇರಿ
ಈ. ಹೂವಿನ ಹಡಗಲಿ - ವೀರಭದ್ರಸ್ವಾಮಿ



downloaded from: www.kpscvaani.com

Scanned by CamScanner